ಮೂ. ದಾ. ನಂ. 93/2022

ಪಿ.ಡಬ್ಲ್ಯು.1

(ಇಂದು ದಿನಾಂಕ 16-10-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್.ಜಿ.ಎನ್. ವಕೀಲರಿಂದಃ**

ನಾನು ಈ ದಾವೆಯನ್ನು 5 ಜನರ ವಿರುದ್ಧ ಸಲ್ಲಿಸಿರುತ್ತೇನೆ. ಅವರ ಹೆಸರು ಈಗ ಹೇಳಲು ನೆನಪಿಲ್ಲ. ಪ್ರತಿವಾದಿಯವರ ವಿಳಾಸವನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ಪ್ರತಿವಾದಿಯವರ ವಿಳಾಸವು ನನಗೆ ಗೊತ್ತಿತ್ತು. ದಾವೆ ಸಲ್ಲಿಸುವ ಕಾಲಕ್ಕೆ ನಾನು ಎಲ್ಲ ಮಾಹಿತಿಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನಾನು ದಾವೆ ಸಲ್ಲಿಸಿದ ಸ.ನಂ. ಈಗ ಹೇಳಲು ನೆನಪಿಲ್ಲ. ನಾನು ದಾವಾಸ್ತಿಯ ಮೋಜಣಿ ಮಾಡಿಸಿದ್ದು ಇರುವುದಿಲ್ಲ. ದಾವಾಸ್ತಿಯ ಗ್ರಾಮ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದು ಗೊತ್ತಿಲ್ಲ. ನಾನು ನನ್ನ ವಾದ ಪತ್ರದ 2 ನೇ ಖಂಡಿಕೆಯಲ್ಲಿ ಹೇಳಿರುವಂತೆ ಸದರಿ ಮನೆಯನ್ನು ನನ್ನ ತಂದೆ ತಾಯಿಯವರು ಯಾವ ವರ್ಷದಲ್ಲಿ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆಗ ನಾನು ಸಣ್ಣವನಾಗಿದ್ದೆನು ಎಂದು ನುಡಿಯುತ್ತಾರೆ. ದಾವಾ ಸ್ಥಳದಲ್ಲಿ ಇದ್ದ ಮನೆಯ ದಾಖಲೆಗಳನ್ನು ನಾನು ನೋಡಿದ್ದು ಇರುವುದಿಲ್ಲ. ನಾನು ಈ ವಾದ ಪತ್ರದ ಜೊತೆ ಹಾಜರುಪಡಿಸಿದ ಹಾತ್ ನಕಾಶೆಯನ್ನು ನಾನು ತಯಾರಿಸಿದ್ದು ಇರುವುದಿಲ್ಲ. ಅದನ್ನು ಯಾರು ತಯಾರಿಸಿದ್ದು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಕುಮಟಾದಲ್ಲಿ ಮೋಜಣಿ ಇಲಾಖೆ ಎಲ್ಲಿದೆ ಎಂದು ನನಗೆ ಗೊತ್ತಿದೆ. ಪ್ರತಿಯೊಂದು ಜಾಗದ ಸರ್ವೇ ಸಮಸ್ಯೆ ಸಂಬಂಧಪಟ್ಟ ಮೋಜಣಿ ಇಲಾಖೆಯಲ್ಲಿ ಸಿಗುತ್ತದೆ ಎಂದರೆ ಸರಿ. ಸಂಬಂಧಪಟ್ಟ ಮೋಜಣಿ ಇಲಾಖೆಗೆ ಹೋಗಿ ದಾವಾಸ್ತಿಯ ನಕಾಶೆಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ದಾವಾಸ್ತಿಯಲ್ಲಿರುವ ಮನೆಯಲ್ಲಿ 40-50 ವರ್ಷಗಳಿಂದ ನನ್ನ ಪೂರ್ವಜರು ವಾಸಮಾಡಿಕೊಂಡು ಬಂದಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ನನ್ನ ಪೂರ್ವಜರು 1 ನೇ ಪ್ರತಿವಾದಿಯವರ ಪೂರ್ವಜರ ಅನುಮತಿಯ ಮೇರೆಗೆ ದಾವಾ ಸ್ಥಳದಲ್ಲಿ

ವಾಸಮಾಡಿಕೊಂಡು ಬಂದಿರುವ ಬಗ್ಗೆ ಯಾವುದೇ ದಾಖೆಗಳು ಇರುವುದಿಲ್ಲ. ದಾವಾ ಸ್ಥಳದಲ್ಲಿ ಒಟ್ಟು 24 ಗುಂಟೆ ಜಾಗ ಇರುತ್ತದೆ. ದಾವಾಸ್ತಿಯಲ್ಲಿರುವ ಮನೆಯು ಯಾವ ದಿಕ್ಕಿಗೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿರುವ ಮನೆಗೆ ಪಾಗಾರ ಹಾಕಿದ್ದು ಇರುವುದಿಲ್ಲ. ಪಾಗಾರ ಹಾಕಲು ಯಾವುದೇ ತೊಂದರೆ ಇರಲಿಲ್ಲ. 1 ನೇ ಪ್ರತಿವಾದಿಯ ಪೂರ್ವಜರು ಅನುಮತಿಯಿಂದ ನನ್ನ ಪೂರ್ವಜರಿಗೆ ದಾವಾಸ್ತಿಯಲ್ಲಿ ಉಳಿದುಕೊಂಡು ಬರಲು ಅನುಮತಿ ನೀಡಿರುವ ವಿಚಾರವನ್ನು ನಾನು ನನ್ನ ವಕೀಲರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ದಾವಾಸ್ತಿಯಲ್ಲಿರುವ ಮನೆಯ ಉದ್ದ ಅಗಲವನ್ನು ದಾವಾ ಪತ್ರದಲ್ಲಿ ಬರೆದಿದ್ದೇನಾ ಎಂದು ಈಗ ಹೇಳಲು ನೆನಪಿಲ್ಲ. ನಾನು ಇವತ್ತು ನ್ಯಾಯಾಲಯಕ್ಕೆ ದಾವಾ ಸ್ಥಳದಲ್ಲಿರುವ ಮನೆಯಿಂದ ಬಂದಿರುತ್ತೇನೆ. ಸದರಿ ಮನೆಯ ಉದ್ದ ಅಗಲ ನನಗೆ ಗೊತ್ತಿಲ್ಲ.

ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಾನು ನನ್ನ ದಾವಾ ಪತ್ರದ 4 ನೇ ಖಂಡಿಕೆಯಲ್ಲಿ ಹೇಳಿರುವಂತೆ ಪ್ರತಿವಾದಿಯವರ ವಿಳಾಸ ಗೊತ್ತಿಲ್ಲದೇ ಇರುವುದರಿಂದ ಹಾಗೂ ನಾನು ಸದರಿ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬರದೇ ಇರುವುದರಿಂದ ಯಾರು ತಕರಾರು ಮಾಡಿದ್ದು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿ ಹಾಗೂ ಇತರ ವ್ಯಕ್ತಿಗಳ ಹೆಸರು ಇರುತ್ತದೆ. ಇತರೇ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿರುವ ಜಾಗವನ್ನು ನನ್ನ ಹೆಸರಿಗೆ ಮಾಡಲು ತೊಂದರೆ ಇರಲಿಲ್ಲ. ಜನಗಣತಿ ಇಲಾಖೆಯವರು ಜನಗಣತಿ ಮಾಡುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಜನಗಣತಿ ಮಾಡುವ ಸಂದರ್ಭದಲ್ಲಿ ದಾವಾಸ್ತಿಯಲ್ಲಿರುವ ಮನೆಯಲ್ಲಿ ನಾನು ವಾಸ್ತವ್ಯ ಇರುವ ವಿಚಾರವನ್ನು ನಮೂದಿಸಲು ತೊಂದರೆ ಇರಲಿಲ್ಲ. ರೇಶನ್ ಕಾರ್ಡ ಹಾಗೂ ಆಧಾರ ಕಾರ್ಡನಲ್ಲಿ ಮನೆ ನಂ. ನಮೂದಿಸುತ್ತಾರೆ ಎಂದರೆ ಸರಿ. ನನ್ನ ಆಧಾರ ಕಾರ್ಡನಲ್ಲಿ ನಾನು ವಾಸ್ತವ್ಯ ಇರುವ ಮನೆಯ ನಂ. ನಮೂದು ಇರುತ್ತದೆ. ಸದರಿ ವಿಚಾರವನ್ನು ನಾನು ದಾವೆಯಲ್ಲಿ ಬರೆದಿರುತ್ತೇನೆ. ನಾನು ದಾವಾಸ್ತಿಯಲ್ಲಿರುವ ಮನೆಯ ತೆರಿಗೆಯನ್ನು ಪಾವತಿ ಮಾಡಿದ್ದು ಇರುವುದಿಲ್ಲ. ದಾವಾಸ್ತಿಯಲ್ಲಿರುವ ಮನೆಯ ತೆರಿಗೆಯನ್ನು ನನ್ನ ಹೆಸರಿನಲ್ಲಿ ಪಾವತಿ

ಮಾಡಿಕೊಂಡು ಬರಲು ತೊಂದರೆ ಇರಲಿಲ್ಲ. ನಮ್ಮ ಪೂರ್ವಜರ ಹೆಸರು ಪುರಸಭೆಯಲ್ಲಿರುವ Property register ಲಿಸ್ಟನಲ್ಲಿ ಇದೆಯಾ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಪರಿಶೀಲಿಸಲು ತೊಂದರೆ ಇರಲಿಲ್ಲ. ಸದರಿ ದಾಖಲೆಯನ್ನು ಪರಿಶೀಲನೆ ಮಾಡಿ ನಮ್ಮ ಪೂರ್ವಜರು ಹೆಸರು ಇಲ್ಲವಾದಲ್ಲಿ ಅದನ್ನು ನಮೂದಿಸಲು ತೊಂದರೆ ಇರಲಿಲ್ಲ. Property register ನಲ್ಲಿ ದಾವಾಸ್ತಿಯಲ್ಲಿರುವ ಆಸ್ತಿಗೆ ನನ್ನ ಹೆಸರನ್ನು ನಮೂದು ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ.

ನನ್ನ ತಂದೆಯವರು 4 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ತೀರಿಕೊಂಡ ಇಸವಿ ನನಗೆ ಗೊತ್ತಿಲ್ಲ. ನನ್ನ ವಕೀಲರಿಗೆ ಮಾಹಿತಿ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯ ಪೂರ್ವಜರು ನನ್ನ ಪೂರ್ವಜರಿಗೆ ದಾವಾಸ್ತಿಯನ್ನು ಎಷ್ಟು ವರ್ಷಗಳ ಹಿಂದೆ ಬಿಟ್ಟುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಜೀವಂತ ಇರುವಾಗ 1 ನೇ ಪ್ರತಿವಾದಿಯ ಪೂರ್ವಜರು ದಾವಾಸ್ತಿಯಲ್ಲಿರುವ ಜಾಗವನ್ನು ಬಿಟ್ಟುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನನ್ನ ತಂದೆಯವರು ಸದರಿ ವಿಷಯ ತಿಳಿಸಿದ ನಂತರ ನಾನು ಸಂಬಂಧಪಟ್ಟ ಇಲಾಖೆಗೆ ಹೋಗಿ ವಿಚಾರಿಸಿದ್ದು ಇರುವುದಿಲ್ಲ. 1 ನೇ ಪ್ರತಿವಾದಿಯವರು ನನ್ನ ಪರವಾಗಿ ಯಾವುದೇ ಹಕ್ಕು ಬಿಡುಗಡೆ ಪತ್ರವನ್ನು ಮಾಡಿದ್ದು ಇರುವುದಿಲ್ಲ. ನಾನು ನನ್ನ ವಾದ ಪತ್ರದ 6 ನೇ ಖಂಡಿಕೆಯಲ್ಲಿ ಬರೆದಂತೆ Adverse possession ಎಂಬ ಪದದ ಅರ್ಥ ನನಗೆ ಗೊತ್ತಿಲ್ಲ. Adverse possession ಪದದ ಅರ್ಥವನ್ನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿದ್ದು ಇರುವುದಿಲ್ಲ. 1 ನೇ ಪ್ರತಿವಾದಿಯವರು ನಾನು ವಾಸ್ತವ್ಯ ಇದ್ದ ಸ್ಥಳಕ್ಕೆ ಬಂದು ಪುಂಡಾಟಿಕೆ ಮಾಡಿರುವುದಾಗಿ ನಾನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. 1 ನೇ ಪ್ರತಿವಾದಿಯವರು ಯಾವ ದಿನದಂದು ನನ್ನ ವಾಸ್ತವ್ಯ ಮನೆಗೆ ಬಂದು ತೊಂದರೆ ನೀಡಿರುತ್ತಾರೆ ಎಂದು ನಾನು ನನ್ನ ವಾದ ಪತ್ರದಲ್ಲಿ ಬರೆಸಿದ್ದು ಇರುವುದಿಲ್ಲ. ಹೊನ್ನಾಂವ್ ಚರ್ಚ ಬಳಿ ನನ್ನ ಸ್ವಂತ ಮನೆ ಇರುವುದಿಲ್ಲ. ದಾವಾಸ್ತಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾಸ್ತಿಯಲ್ಲಿರುವ ಮನೆಯ ಕರೆಂಟ್ ಬಿಲ್, ನೀರಿನ ತೆರಿಗೆ ಹಾಗೂ

ಇತರ ತೆರಿಗೆಗಳನ್ನು 1 ನೇ ಪ್ರತಿವಾದಿಯವರು ಪಾವತಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾಸ್ತಿಯಲ್ಲಿರುವ ಮನೆಯ ತೆರಿಗೆ ಪಾವತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಪಾವ್ಲಿನ್ ಸಾಲ್ವಾದೋರ್ ವಲ್ಲಾಡೋ ವ್ಯಕ್ತಿ ಯಾರೆಂದು ನನಗೆ ಗೊತ್ತಿಲ್ಲ. ಸದರಿಯವರ ಹೆಸರು ಪುರಸಭೆಯಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ವಿಧ್ಯುತ್ ಸರಬರಾಜು ಕಂಪನಿ ರೆಜಿಸ್ಟರ್ ನಲ್ಲಿ 1 ನೇ ಪ್ರತಿವಾದಿಯವರ ಹೆಸರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ಥಳದಲ್ಲಿರುವ ಮನೆಯ ಕರೆಂಟ್ ಬಿಲ್ ನ್ನು ನಾನೇ ಪಾವತಿ ಮಾಡಿರುತ್ತೇನೆ. ಸದರಿ ಪಾವತಿ ರಶೀದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ನಾವು ದಾವಾ ಸ್ಥಳದಲ್ಲಿ ಯಾವತ್ತೂ ನಾನಾಗಲಿ ನನ್ನ ಪೂರ್ವಜರಾಗಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ ತಂಗಿಯರು ವಾಸಮಾಡಿಕೊಂಡಿರುವ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ